ದಿನಾಂಕ : 18-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ.ಹೆಚ್.ಸಿ.ಎಸ್. ವಕೀಲರಿಂದ**

ನನ್ನ ಮತ್ತು ನನ್ನ ಗಂಡ ಮೃತ ಬಸವರಾಜ ಅವರ ದಾಂಪತ್ಯ ಜೀವನದಿಂದ ನನಗೆ ಮೂರು ಜನ ಮಕ್ಕಳಿದ್ದಾರೆ. ನಾನು 3ನೇ ಮಗುವಿಗೆ ಗರ್ಭಿಣಿ ಆಗಿದ್ದಾಗ ನನ್ನ ತವರುಮನೆ ತುರಕರ ಶೀಗೆಹಳ್ಳಿ ಯಲ್ಲಿದ್ದಾಗ ನನ್ನ ಗಂಡ ಬಸವರಾಜ ಬಸರಕೋಡ ಗ್ರಾಮದಿಂದ ನನ್ನನ್ನು ನೋಡಲು ಬೈಕ ಅಥವಾ ಕಾರಿನಲ್ಲಿ ಬರುತ್ತಿದ್ದರು, ಕೆಲವೊಂದು ಸಾರಿ ಉಳಿದುಕೊಳ್ಳುತ್ತಿದ್ದರು, ಕೆಲವೊಂದು ಸಾರಿ ಹೊರಟುಹೋಗುತ್ತಿದ್ದರು.

2. ಕಿತ್ತೂರಿನಲ್ಲಿ ಯಾವುದಾದರೂ ಕೆಲಸಕ್ಕೆ ಹೋಗಬೇಕಾದರೆ, ದೇವಗಾಂವ ಪಂಚಾಯತಿಗೆ ಹೋಗಬೇಕಾದರೆ ಬೈಕ್ ತೆಗೆದುಕೊಂಡು ಹೋಗುತ್ತಿದ್ದರು. 2015-16 ರಲ್ಲಿ ನನ್ನ ಗಂಡ ಅಣ್ಣಪ್ಪ ಪೂಜಾರಿ ಎನ್ನುವವರ ವಿರುದ್ಧ ಚುನಾವಣೆಗೆ ಸ್ಪರ್ಧಿಸಿ ಗೆದ್ದಿದ್ದರು. ಕರೆಮ್ಮ ದೇವಸ್ಥಾನದ ಮುಂಭಾಗದಲ್ಲಿ ಅಣ್ಣಪ್ಪ ಪೂಜಾರಿ ಅವರ ಮನೆ ಇದೆ. ದೇವಸ್ಥಾನದಿಂದ 4-5 ಮನೆಗಳ ನಂತರ ನಮ್ಮ ಮನೆ ಇದೆ.

3. ನಮ್ಮ ಮನೆಯ ಮುಂದೆ ಸಿಮೆಂಟ್ ರಸ್ತೆ ಇದ್ದು ಅದು ಇಳಿಜಾರಾಗಿದೆ ಎನ್ನುವುದು ಸರಿ. ರಸ್ತೆಯ ಎರಡೂ ಬದಿಗಳಲ್ಲಿ ಮನೆಗಳು ಇವೆ ಎನ್ನುವುದು ಸರಿ. ನನ್ನ ಗಂಡ ಸಾಯುವ ಒಂದು ತಿಂಗಳ ಮೊದಲು ಬೈಕ್ ಮೇಲೆ ಹೋಗುವಾಗ ಕೆಳಗೆ ಬಿದ್ದು, ಆತನ ಹಣೆಗೆ ಪೆಟ್ಟಾಗಿತ್ತು, ಬಲಗೈಗೆ ಮೂಳೆ ಮುರಿದಿತ್ತು ಮತ್ತು ಅದಕ್ಕೆ ಪ್ಲಾಸ್ಟರಿಂಗ್ ಮಾಡಲಾಗಿತ್ತು ಎಂದು ಹೇಳುವುದು ಸರಿಯಲ್ಲ. ನನ್ನ ಗಂಡನಿಗೆ ಏನೂ ತೊಂದರೆ ಆಗಿರಲಿಲ್ಲ, ಅವರೊಂದಿಗೆ ಇದ್ದ ಹನೀಫ್ ಅವರಿಗೂ ಏನೂ ತೊಂದರೆ ಆಗಿರಲಿಲ್ಲ, ನನ್ನ

ಗಂಡ ಎಂದೂ ಮೋಟರಬೈಕ್ ಮೇಲಿಂದ ಬಿದ್ದಿರುವುದಿಲ್ಲ.

4. ನನ್ನ ಗಂಡ ಎಲ್ಲಿಗೆ ಹೋಗುತ್ತಿದ್ದರು, ಏನು ಮಾಡುತ್ತಿದ್ದರು ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ನಾನು ನನ್ನ ಗಂಡನೊಂದಿಗೆ ವಾಸ ಇದ್ದೇನು, ನಾನು ಹೆಚ್ಚು ದಿನ ನನ್ನ ತವರುಮನೆಯಲ್ಲಿ ಇರಲಿಲ್ಲ, ನನ್ನ ತಾಯಿಗೆ ಕಣ್ಣು ಆಪರೇಶನ ಮಾಡಿಸುವ ವಿಚಾರದಲ್ಲಿ ಮಾತ್ರ ಹೋಗಿದ್ದೇನು. ನನ್ನ ಗಂಡ ಬಂದು ಹೋಗುತ್ತಿದ್ದುದರಿಂದ ನನಗೆ ಎಲ್ಲಾ ವಿಚಾರ ಗೊತ್ತಿರುತ್ತದೆ.

5. ನನ್ನ ಗಂಡನಿಗೆ ಯಾರೋ ಹೊಡೆದಿದ್ದಾರೆ ಎಂದು, ಆತನಿಗೆ ಪ್ರಜ್ಞೆ ಹೋಗಿದೆ ಎಂದು ನನ್ನ ಮೈದುನ ನನಗೆ ಬಂದು ಹೇಳಿದನು ಎಂದು ನಾನು ಪಿರ್ಯಾದಿಯಲ್ಲಿ ಹೇಳಿ ಬರೆಸಿದ್ದೇನೆ ಎನ್ನುವುದು ಸರಿ. ನನ್ನ ಗಂಡ ಬಿದ್ದ ವಿಚಾರ, ಆತನನ್ನು ಆಸ್ಪತ್ರೆಗೆ ಸೇರಿಸಿದ ವಿಚಾರವನ್ನು ನಮ್ಮ ಗಂಡನ ಮನೆಯವರು ಮತ್ತು ಪೋಲಿಸರು ಹೇಳಿದ್ದರಿಂದ ನನಗೆ ತಿಳಿದಿರುತ್ತದೆ ಎನ್ನುವುದು ಸರಿ, ಮತ್ತು ಆ ವಿಚಾರವನ್ನು ನನ್ನ ದೂರಿನಲ್ಲಿ ಬರೆದಿದ್ದೇನೆ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ನನ್ನ ಗಂಡ ಬಿದ್ದು ಸತ್ತಿಲ್ಲ, ಆತನನ್ನು ಕೊಲೆ ಮಾಡಲಾಗಿದೆ ಎಂದು ಹೇಳಿದ್ದಾರೆ.

6. ಆರೋಪಿತರಾದ ಮಾಹಂತೇಶನ ಹೆಂಡತಿ ಅಥವಾ ಗೋಪಾಲನ ಹೆಂಡತಿ ಅವರೊಂದಿಗೆ ನನ್ನ ಗಂಡ ಅಸಭ್ಯವಾಗಿ ವರ್ತಿಸಿದ ವಿಚಾರವಾಗಿ ಪೋಲಿಸ ಠಾಣೆಯಲ್ಲಿ ಯಾವುದೇ ದೂರು ದಾಖಲಾಗಿರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ಗಂಡ ಯಾರೊಂದಿಗೂ ಅಸಭ್ಯವಾಗಿ ನಡೆದುಕೊಂಡಿಲ್ಲ ಎಂದು ಹೇಳಿದ್ದಾರೆ.

7. ನಮ್ಮ ಮನೆಯವರಾಗಲೀ, ಪೋಲಿಸರಾಗಲೀ ನನ್ನ ಗಂಡ ಬಿದ್ದ ಸ್ಥಳ, ಆಸ್ಪತ್ರೆ, ಧಾರವಾಡದ ಶವಾಗಾರಕ್ಕೆ ಆ ದಿನ ಸಂಜೆಯವರೆಗೂ ನನ್ನನ್ನು ಕರೆದುಕೊಂಡು

ಹೋಗಿರಲಿಲ್ಲ ಎನ್ನುವುದು ಸರಿ. ನನ್ನ ಗಂಡನ ವಿಚಾರವಾಗಿ ನಮ್ಮ ಕುಟುಂಬದವರು ಓಡಾಡುತ್ತಿದ್ದು, ಪೋಲಿಸರು ನನ್ನನ್ನು ಕರೆದುಕೊಂಡು ಬರುವಂತೆ ಹೇಳಿದ್ದರಿಂದ ನಮ್ಮ ಮನೆಯವರು ನನ್ನನ್ನು ಕರೆದುಕೊಂಡು ಹೋದರು ಎನ್ನುವುದು ಸರಿ.

8. ನನ್ನ ಗಂಡ ತೀರಿಕೊಂಡ ನಂತರ ನನಗೆ ಸರ್ಕಾರದಿಂದ ನೌಕರಿ ಸಿಕ್ಕಿದ್ದು, ಈಗ ನಾನು ನನ್ನ ಕುಟುಂಬದವರೊಂದಿಗೆ ಅಥಣಿಯಲ್ಲಿ ವಾಸವಾಗಿದ್ದೇನೆ ಎನ್ನುವುದು ಸರಿ.

9. ಚಾಸಾಃ 3 ಫಕೀರಪ್ಪ ದೊಡಮನಿ ನನ್ನ ಸೋದರಮಾವ, ಚಾಸಾಃ 9 ರುದ್ರಪ್ಪ ನನ್ನ ಗಂಡನ ತಂದೆ, ನನ್ನ ಮಾವ. ಚಾಸಾಃ 10 ನೀಲಗಂಗವ್ವ ನನ್ನ ಅತ್ತೆ. ಚಾಸಾಃ 11 ಯಲ್ಲಪ್ಪ ನನ್ನ ಗಂಡನ ಚಿಕ್ಕಪ್ಪ. ಚಾಸಾಃ 12 ಫ್ರಾಸಾಃ 2 ವಿಠ್ಠಲ ನನ್ನ ಗಂಡನ ತಮ್ಮ. ಚಾಸಾಃ 13 ಶ್ರೀಶೈಲ ನನ್ನ ಗಂಡನ ತಮ್ಮ. ಚಾಸಾಃ 20 ಶಿವಪ್ಪ ನನ್ನ ಸಂಬಂಧಿಕರು. ಚಾಸಾಃ 21 ಯಲ್ಲಮ್ಮ ನಮ್ಮ ತಾಯಿ. ನಮ್ಮ ತಾಯಿಯನ್ನು ಹೊರತುಪಡಿಸಿ ಈಗ ಮೇಲೆ ಹೇಳಿದ ಎಲ್ಲರೂ ನಮ್ಮ ಓಣಿಯಲ್ಲಿರುತ್ತಾರೆ ಎನ್ನುವುದು ಸರಿ.

**ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬೆಳಗಾವಿ.